## ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 05-12-2022

### ಬೀದರ ನೂತನ ನಗರ ಠಾಣೆ ಅಪರಾಧ ಸಂಖ್ಯೆ 216/2022 ಕಲಂ 379 ಐಪಿಸಿ :-

ದಿನಾಂಕ 04/12/2022 ರಂದು 1800 ಗಂಟೆಗೆ ಫಿರ್ಯಾದಿ ಶ್ರೀ. ಸೈಯದ ಆಜಂ ತಂದೆ ಸೈಯದ ಅಬ್ದುಲ ವಾಜೀದ ವಯ:41 ವರ್ಷ ಜಾತಿ:ಮುಸ್ಲಿಂ ಉ:ವ್ಯಾಪಾರ ಸಾ:ನೂರಖಾನ ತಾಲೀಮ ತಾ:ಬೀದರ ಇವರು ಠಾಣೆಗೆ ಹಾಜರಾಗಿ ದೂರು ನೀಡಿದರ ಸಾರಾಂಶವೆನೆಂದರೆ, ಇವರ ಹತ್ತಿರವಿರುವ ಹೀರೊ ಪ್ಯಾಶನ ಪ್ರೊ ಮೊಟರ ಸೈಕಲ ನಂ.ಕೆಎ38ಆರ5388 ನೇದನ್ನು 2014 ಸಾಲೀನಲ್ಲಿ ಖರೀದಿಸಿದ್ದು, ಅದನ್ನು ದಿನಾಂಕ 19/11/2022 ರಂದು 04:30 ಪಿ.ಎಮ ಗಂಟೆಯ ಸಮಯಕ್ಕೆ ಮನೆಯಿಂದ ನೆಹರು ಕ್ರಿಡಾಂಗಣಕ್ಕೆ ಹೋಗಿ ಮೊಟರ ಸೈಕಲನ್ನು ಕ್ರಿಡಾಂಗಣದ ಪಾರ್ಕಿಂಗ ಏರಿಯಾದಲಿ ನಿಲ್ಲಿಸಿ ಫುಟಬಾಲ ಮ್ಯಾಚ ನೋಡಲು ಕ್ರಿಡಾಂಗಣದ ಒಳಗಡೆ ಹೋಗಿ ಮ್ಯಾಚ ನೋಡಿಕೊಂಡು ನಂತರ 6:00 ಪಿ.ಎಮ ಗಂಟೆಯ ಸುಮಾರಿಗೆ ಮರಳಿ ಹೊರಗೆ ಬಂದು ನೋಡಿದಾಗ ನನ್ನ ಮೊಟರ ಸೈಕಲ ವಇಟ್ಟಿದ್ದ ಜಾಗದಲ್ಲಿ ಇದ್ದಿರುವದಿಲ್ಲ ಅಂದಾಜು ಕಿಮ್ಮತ್ತು ರೂ-25,000/-ರೂ ಆಗಿರುತ್ತದೆ. ಕಳುವಾದ ಮೊಟರ ಸೈಕಲನ್ನು ಎಲ್ಲ ಕಡೆಗೆ ಹುಡುಕಾಡಿ ಎಲ್ಲಿಯೂ ಸಿಗದಿದ್ದಾಗ ನಮ್ಮ ಮನೆಯಲ್ಲಿ ವಿಚಾರಿಸಿಕೊಂಡು ಠಾಣೆಗೆ ಬಂದು ದೂರು ನೀಡಲು ತಡವಾಗಿರುತ್ತದೆ. ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

### ನೂತನ ನಗರ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 217/2022 ಕಲಂ 392 ಐಪಿಸಿ :-

ದಿನಾಂಕ 04/12/2022 ರಂದು 2200 ಗಂಟೆಗೆ ಫಿರ್ಯಾದಿ ಕುಮಾರಿ ರಂಜಿತಾ ತಂದೆ ಮಾರುತಿ ಟೀಲೆಕರ ವಯ:23 ವರ್ಷ ಜಾತಿ:ಹರಳ್ಳಯ್ಯಾ(ಸಮಗಾರ) ಉ:ಮನೆಗೆಲಸ ಸಾ:ಬಾಬಾ ಶೂ ಅಂಗಡಿ ಹಿಂದುಗಡೆ ಜಿಲ್ಲಾ ಕಾರಾಗೃಹ ಎದುರಗಡೆ ಉದಗೀರ ರೋಡ ಬೀದರ. ರವರು ಠಾಣೆಗೆ ಹಾಜರಾಗಿ ನೀಡಿದ ಹೇಳಿಕೆ ಪಡೆದುಕೊಂಡಿದ್ದು, ಸದರಿ ಹೇಳಿಕೆ ಸಾರಾಂಶ ಏನೆಂದರೆ ದಿನಾಂಕ 04/12/20222 ರಂದು ಸಾಯಂಕಾಲ 5:00 ಪಿ.ಎಮ್ ಗಂಟೆಯ ಸಮಯಕ್ಕೆ ಫರ್ಯಾದಿ ಮತ್ತು ಗೆಳತಿಯಾದ ಕುಮಾರಿ ಜೋಸನಾ ತಂದೆ ಪಂಡಿತ ಸಾ:ಇಡನ ಕಾಲೋನಿ ಬೀದರ, ಇಬ್ಬರು ಕೂಡಿಕೊಂಡು ಜೋಸನಾ ಇವಳ ಎಕ್ಟಿವಾ ಮೋಟರ ಸೈಕಲ ನಂ ಕೆಎ38ವಾಯ1390 ನೇದರ ಮೇಲೆ ಬಿಗ ಬಜಾರಕ್ಕೆ ಹೋಗಿ ಮಾರ್ಕೆಟಿಂಗ ಮಾಡಿಕೊಂಡು ಮರಳಿ ಮನೆಯ ಕಡೆಗೆ ಬರುತ್ತಿರುವಾಗ ಮೋಟರ ಸೈಕಲ ಚಲಾಯಿಸುತ್ತಿದ್ದು ಗೆಳತಿ ಹಿಂದಿನ ಸೀಟಿನ ಮೇಲೆ ಕುಳಿತಿದ್ದಳ್ಳು, ಶಿವಾಜಿ ವೃತದ ಕಡೆಯಿಂದ ಅಂಬೇಡ್ಕರ ವೃತದ ಕಡೆಗೆ ಬರುವ ವೇಳೆಯಲ್ಲಿ ಅಂಬೇಡ್ಕರ ವೃತ್ತದ ಟ್ರಾಫಿಕ ರೆಡ್ ಸಿಗ್ನಲ ಬಿದ್ದ ಕಾರಣ ಅಲ್ಲಿಯೆ ನಿಂತು ನಂತರ ಸಿಗ್ನಲ ಮುಗಿದ ನಂತರ ಸರ್ಕಾರಿ ಆಸ್ಪತ್ರೆಯ ಕಡೆ ತಿರುಗುವ ಸಮಯದಲ್ಲಿ ಅಂದಾದು 6:15 ಪಿ.ಎಮ್. ಗಂಟೆಯ ಸಮಯಕ್ಕೆ ರೋಡಿನ ಮೇಲೆ ಹಿಂದಿನಿಂದ ಒಂದು ಕಪ್ಪು ಬಣ್ಣದ ಮೋಟರ ಸೈಕಲ ಮೇಲೆ ಇಬ್ಬರು ವ್ಯಕ್ತಿಗಳು ಬಂದು ಫರ್ಯಾದಿ ಕೊರಳ್ಳಲ್ಲಿದ್ದ 10 ಗ್ರಾಂ ತೂಕದ ಬಂಗಾರದ ಲ್ಯಾಕೇಟ ಮದ್ಯದಲ್ಲಿ ಓಂ ಎಂಬ ಪದಕವುಳ್ಳದ್ದು ಅ.ಕಿ 50,000/-ರೂ ಬೆಲೆ ಬಾಳುವ ಸರವನ್ನು ಹಿಂದೆ ಕುಳತ ವ್ಯಕ್ತಿ ತನ್ನ ಕೊರಳಿಗೆ ಕೈ ಹಾಕಿ ಕಿತ್ತುಕೊಂಡು ತನ್ನ ಮೋಟರ ಸೈಕಲನ್ನು ಜನವಾಡಾ ರೋಡಿನ ಮೇಲೆ ಜೋರಾಗಿ ಓಡಿಸಿಕೊಂಡು ಹೋಗುವಾಗ ನಾವು ಸಹ ನಮ್ಮ ಮೋಟರ ಸೈಕಲ ಮೇಲೆ ಅವರ ಹಿಂದೆ ನವದಗೇರಿ ಚರ್ಚ ವರೆಗೆ ಅವರನ್ನು ಬೆನ್ನಟಿದರೂ ಸಹ ಅವರು ಜೋರಾಗಿ ತಮ್ಮ ಮೋಟರ ಸೈಕಲನ್ನು ಓಡಿಸಿಕೊಂಡು ಜನವಾಡಾ ರೋಡ ಕಡೆಗೆ ಹೋಗಿದ್ದು ಇರುತ್ತದೆ. ಅವರಲ್ಲಿ ಒಬ್ಬನ್ನು ವಾಹಾನ ಚಲಾಯಿಸುತ್ತಿದ್ದ ವ್ಯಕ್ತಿ ಕಣ್ಣಿಗೆ ಕಾಡಿಗೆ ಹಚ್ಚಿದ ತರಹ ಕಾಣುತಿದ್ದು,

ಹಿಂದೆ ತೆಲೆಗೆ ಸಿಖ ಜನಾಂಗದವರ ತರಹ ಪಗಡಿ ಕಟ್ಟಿಕೊಂಡಿದ್ದು ಇರುತ್ತದೆ. ಹಿಂದೆ ಕುಳಿತ ವ್ಯಕ್ತಿಯ ಮೈಮೇಲೆ ಪಿಂಕ ಬಣ್ಣದ ಶರ್ಟ ಹಾಗು ಕಪ್ಪು ಪ್ಯಾಂಟ ಹಾಗು ಕಪ್ಪು ಪಗಡಿ ಕಟ್ಟಿಕೊಂಡಿದ್ದು ಇರುತ್ತದೆ. ಕಳ್ಳರನ್ನು ನೋಡಿದರೆ ಗುರುತಿಸುತ್ತೇನೆ. ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

**ಬೀದರ ಗ್ರಾಮೀಣ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 82/2022 ಕಲಂ 87 ಕೆಪಿ ಕಾಯ್ದೆ :-**

ದಿನಾಂಕ 04/12/2022 ರಂದು ಪಿಎಸ್ಐ ರವರು ಠಾಣೆಯಲ್ಲಿದ್ದಾಗ ಕಮಠಾಣಾ ಶಿವಾರದ ಅರಣ್ಯ ಪ್ರದೇಶದಲ್ಲಿ ಕೆಲವು ಜನರು ಇಸ್ಪೀಟ ಎಲೆಗಳ ಮೇಲೆ ಹಣ ಹಚ್ಚಿ ಅಂದರ ಬಾಹರ ಜುಜಾಟ ಆಡುತಿದ್ದಾರೆ ಅಂತ ಖಚಿತ ಭಾತ್ಮಿ ಬಂದಿದರ ಮೇರೆಗೆ ಸಿಬ್ಬಂದಿಯೊಂದಿಗೆ ಕಮಠಾಣಾ ಶಿವಾರದ ಕಾಡಿನ ಒಂದು ಗಿಡದ ಕೆಳಗೆ ಸ್ವಲ್ಪ ದೂರದಲ್ಲಿ ಖಾಸಗಿ ಕಾರ ನಿಲ್ಲಿಸಿ ಮರೆಯಲ್ಲಿ ನಿಂತು ನೋಡಲಾಗಿ ಅಲ್ಲಿ ಟಾರ್ಚಿನ ಬೆಳಕಿನಲ್ಲಿ 6 ಜನರು ಇಸ್ಪೀಟ ಎಲೆಗಳ ಮೇಲೆ ಹಣ ಹಚ್ಚಿ ಅಂದರ ಬಾಹರ ಜುಜಾಟ ಆಡುತಿದ್ದನ್ನು ನೋಡಿ ಖಚಿತ ಪಡಿಸಿಕೊಂಡು ಸಾಯಾಂಕಾಲ 1830 ಗಂಟೆಗೆ ಪಂಚರ ಸಮಕ್ಷಮ ನಾನು ಸಿಬ್ಬಂದಿಯೊಂದಿಗೆ ದಾಳಿ ಮಾಡಿ ಜುಜಾಟ ಆಡುತಿದ್ದ 6 ಜನರನ್ನು ಅಲ್ಲೆ ಹಿಡಿದಿದ್ದು ಸದರಿಯವರ ಹೆಸರು ವಿಳಾಸ ಕೇಳಲು ಅವರು ತಮ್ಮ ಹೆಸರು 1) ಶಿವಕುಮಾರ ತಂದೆ ಅಮೃತರಾವ ನವಲಾಸಪೂರ ವಯ 40 ವರ್ಷ ಜಾ :ಲಿಂಗಾಯತ ಸಾ : ಕಮಠಾಣಾ 2) ರಾಮಶೆಟ್ಟಿ ತಂದೆ ಹಣಮಂತಪ್ಪಾ ಯಾಬಾ ವಯ 50 ವರ್ಷ ಜಾ॥ ಲಿಂಗಾಯತ ಉ॥ ಕೂಲಿಕೆಲಸ ಸಾ: ಕಮಠಾಣಾ 3) ಹಣಮಂತ ತಂದೆ ವೈಜಿನಾಥ ಚಾಂಬಳೆ ವಯ-33 ವರ್ಷ ಜಾ : ಎಸ್.ಟಿ ಗೊಂಡ ಉ : ಬಿಲ್‌ಕಲೆಕ್ಟರ ಸಾ: ಕಮಠಾಣಾ 4) ಮಹೇಶ ತಂದೆ ಬಸವರಾಜ ಯಾಬಾ ವಯ 30 ವರ್ಷ ಜಾ : ಲಿಂಗಾಯತ ಉ : ಕೂಲಿ ಕೆಲಸ ಸಾ : ಕಮಠಾಣಾ 5) ಲತೀಸ ತಂದೆ ವೈಜಿನಾಥ ಬಿರಾದಾರ ವಯ 35 ವರ್ಷ ಜಾ : ಲಿಂಗಾಯತ ಸಾ : ಕಮಠಾಣಾ 6) ಸಂಜು ತಂದೆ ಶರಣಪ್ಪಾ ನಾದಗೆ ವಯ 45 ವರ್ಷ ಜಾ : ಲಿಂಗಾಯತ ಉ॥ ಕೂಲಿ ಸಾ॥ ಕಮಠಾಣಾ ಅಂತ ತಿಳಿಸಿದರು. ಮತ್ತು ಸ್ಥಳದಲ್ಲಿ ಪರೀಶಿಲನೆ ಮಾಡಲು ಅಲ್ಲಿ ಜುಜಾಟದಲ್ಲಿ ಎಲ್ಲರ ಮುಂದೆ ಒಂದು ಪೇಪರ ಮೇಲೆ 500/- ರೂಪಾಯಿಯ 6 ನೋಟು, 100/- ರೂಪಾಯಿಯ 8 ನೋಟುಹೀಗೆ ಒಟ್ಟು 3800/- ರೂ ಮತ್ತು 52 ಇಸ್ಪೀಟ ಎಲೆಗಳು ಸಿಕ್ಕಿದ್ದು ಇವುಗಳು ಪಂಚರ ಸಮಕ್ಷಮ ಜಪ್ತಿ ಮಾಡಿಕೊಂಡು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.